# ಆಹಾ ಸುದ್ದಿ!

★ ಸಸಿತೋಟ

ಈಕೆ ಚೀನಾದ ಗಟ್ಟಿಗಿತ್ತಿ ಮಹಿಳೆ. ಜಗಳದ ಮಧ್ಯೆ ತಪ್ಪಿಸಿಕೊಂಡು ಓಡಿದ ಗಂಡನನ್ನು ತಡೆಯಲು ಕಾರಿನ ಹೂಡ್ ಮೇಲೆ ಕೂತಳಂತೆ. ಗಂಡ ಜಮಗಟ್ಟಿ. ಹಾಗೆಯೇ ಕಾರು ಚಲಾಯಿಸಿಕೊಂಡು ರಸ್ತೆಗಿಳಿದನಂತೆ. ಇದೊಂಥರ ಡ್ರೈವ್—ಇನ್ ಜಗಳ.



ಚೀನಾದ ಚಾಂಗ್‌ಕಿಂಗ್ ಎಂಬ ಪ್ರದೇಶದಲ್ಲಿ ನಿರ್ಮಿಸಿರುವ ಅಂಕುಡೊಂಕಿನ ರಸ್ತೆ. ಕುಣಿಯಲಾರದವ ನೆಲ ಡೊಂಕು ಎಂದನಂತೆ ಎನ್ನುವ ಗಾದೆಯನ್ನು ಸರಿಯಾಗಿ ಚಾಲನೆ ಬಾರದವ ರಸ್ತೆ ಡೊಂಕು ಎಂದನಂತೆ ಎಂದು ಬದಲಾಯಿಸಿಕೊಳ್ಳಬಹುದು.



ಮಾಧ್ಯಮದಲ್ಲಿ ನುಸುಳುವ ಸುಳ್ಳು ಸುದ್ದಿಯನ್ನು ಪತ್ತೆ ಮಾಡುವುದು ಹೇಗೆ ಎಂದು ತಲೆ ಕೆಡಿಸಿಕೊಂಡ ಅಮೆರಿಕದ ರಾಷ್ಟ್ರೀಯ ವಿಜ್ಞಾನ ಸಂಸ್ಥೆ ಇದಕ್ಕಾಗಿ ತಂತ್ರಜ್ಞಾನ ಕಂಡುಹಿಡಿಯಲು ಇಬ್ಬರು ಪ್ರಾಧ್ಯಾಪಕರಿಗೆ ತಲಾ 3 ಲಕ್ಷ ಡಾಲರ್ ಧನಸಹಾಯ ನೀಡಿದೆಯಂತೆ. ಇವರಲ್ಲಿ ಒಬ್ಬರು ಭಾರತೀಯ ಮೂಲದವರು. ಹಣವನ್ನು ವ್ಯರ್ಥವಾಗಿ ಖರ್ಚು ಮಾಡುವುದು ಹೇಗೆ ಎಂಬುದನ್ನು ಅಧ್ಯಯನ ನಡೆಸಲು ಧನಸಹಾಯ ನೀಡಬಹುದಿತ್ತು ಎಂದು ಕೆಲವರು ಕುಹಕವಾಡಿದ್ದಾರಂತೆ.

ಲಂಡನ್ನಿನ ಶಾಲೆಯೊಂದು ವಸ್ತ್ರ ಸಂಹಿತೆಯನ್ನು ಉಪಾಯವಾಗಿ ಜಾರಿಗೆ ತಂದಿದೆಯಂತೆ. ಹುಡುಗಿಯರು ಅತ್ಯಂತ ಗಿಡ್ಡದಾದ ಸ್ಕರ್ಟ್ ಧರಿಸಿ ಬರಬಾರದು ಎಂಬ ನಿಯಮಕ್ಕೆ ಎಲ್ಲರೂ ಕ್ಯಾತೆ ತೆಗೆದರಂತೆ. ಆಗ ತಲೆ ಓಡಿಸಿದ ಶಾಲೆಯ ಆಡಳಿತ ಮಂಡಳಿ ಲಿಂಗ ಸಮಾನತೆ ಎಂಬ ಹೆಸರಲ್ಲಿ ಗಂಡಿರಲಿ, ಹೆಣ್ಣಿರಲಿ, ಪಾದ ಮುಚ್ಚುವ ಪ್ಯಾಂಟ್ ಇರಲಿ ಎಂಬ ಕಾನೂನು ಜಾರಿಗೆ ತಂದಿದೆಯಂತೆ.



ಈಕೆ ರಷ್ಯಾದ ರೂಪದರ್ಶಿ ಯೆಕಟೆರಿನಾ ಲಿಸಿನಾ. 6 ಅಡಿ 8.77 ಇಂಚು ಎತ್ತರದ ಈಕೆಯ ಕಾಲೇ 52 ಇಂಚು ಉದ್ದವಂತೆ. ಅತ್ಯಂತ ಎತ್ತರದ ರೂಪದರ್ಶಿ, ಅತ್ಯಂತ ಉದ್ದದ ಕಾಲುಗಳು.. ಹೀಗೆ ಎರಡೆರಡು ಗಿನ್ನೆಸ್ ದಾಖಲೆಗಳು ಈಕೆಯ ಹೆಸರಲ್ಲಿದ್ದು, ಉದ್ದ ಕಾಲುಗಳನ್ನಿಡಲು ಜಾಗವಿರುವ ಕಾರಿನ ಹುಡುಕಾಟದಲ್ಲಿ ಇದ್ದಾಳಂತೆ. ಈಕೆಯ ಸಮಸ್ಯೆಯೂ ಉದ್ದುದ್ದವೇ!




ಕ್ಯಾಲಿಫೋರ್ನಿಯಾದ ಈ ಮುತ್ತಜ್ಜ ಜಿಮ್ ಅರಿಂಗ್ಟನ್ 85ರ ಹರೆಯದಲ್ಲಿಯೂ ದೇಹದಾರ್ಢ್ಯ ಹೆಚ್ಚಿಸುವಲ್ಲಿ ಆಸಕ್ತಿ ತೋರಿಸುತ್ತ ಗಿನ್ನೆಸ್ ದಾಖಲೆ ಪ್ರವೇಶಿಸಿದ್ದಾನಂತೆ. ಈತ ತನ್ನ ಡಯಟ್ ಬಗ್ಗೆ ಗಟ್ಟಿಯಾಗಿ ಹೇಳಿಕೊಳ್ಳುತ್ತಿದ್ದರೆ, ಪಿಜ್ಜಾ, ಬರ್ಗರ್ ತಿನ್ನುವ ಎಳೆ ಬೆರಳುಗಳೂ ನಡುಗಬಹುದು.